ಅಭ್ಯಾಸವಾಗಿದ್ದ ಹಿರಿ ಜೀವಕ್ಕೆ ಅವಗಣನೆಯ ಸೂಕ್ಷ್ಮ ನೋವು. ಊಟಕ್ಕೂ ಜೊತೆಗೆ ಕೂರದೆ ಪಂಕ್ತಿ ತಪ್ಪಿಸಿ, ಅವನ ಡ್ಯೂಟಿ ಇದ್ದಾಗ ಅನಿವಾರ್ಯ. ಮನೆಯಲ್ಲಿದ್ದರೂ ಮಾವನ ಜೊತೆ ನಗುತ್ತಾ ಎರಡು ಮಾತಾಡಿದರೆ ಮುತ್ತು ಉದುರುತ್ತದೆಯಾ? ಯಾಕೆ ಹೀಗೆ? ಹೋಗಲಿ, ಸ್ವಭಾವವೇ ಹೀಗೆ ಅಂದುಕೊಳ್ಳೋಣವೆಂದರೆ ತನಗೆ ಆಪ್ತರಾದವರ ಜೊತೆ ಸದರದಿಂದ ಇರುತ್ತಾನೆನ್ನುವುದಕ್ಕೆ ಭಟ್ಟರು ಸಾಕ್ಷಿಯಾಗಿದ್ದಾರೆ. ಊರಿಗೆ ಹಿಂದಿರುಗಿದ ಮೇಲೂ ಬಹಳ ದಿನ ಮನಸ್ಸನ್ನು ಹಿಂಡುತ್ತಿದ್ದ ವ್ಯಗ್ರತೆ, ವಿಷಾದ.

ಚಕ್ಕನೆ ಒಂದು ಬೆಳಗಿನ ಜಾವ, ರಾತ್ರಿಯ ನಿದ್ದೆ ಕಳೆದು ಎಚ್ಚರಾದ ಹೊತ್ತಲ್ಲಿ ಹೊಳೆದಿತ್ತು ಉತ್ತರ. 'ಅಯ್ಯೋ ಪೆದ್ದಪ್ಪಾ, ಇನ್ನೂ ಗೊತ್ತಾಗಲಿಲ್ವೇನೋ ಉತ್ತರ? ನಿನ್ನ ಮಗಳು ಯಾರು? ಅವನ ಹೆಂಡತಿ. ಅವನಿಗೆ ಸೇರಿದವಳು. ತನ್ನ ಸ್ವಂತ ಆಸ್ತಿ ಅಂದುಕೊಂಡಿರುತ್ತಾನೆ. ತನ್ನ ಹೊರತಾಗಿಯೂ ಅಪ್ಪನ ಮೇಲೆ ಅವಳು ಅಷ್ಟೊಂದು ಜೀವ ಇಟ್ಟುಕೊಂಡಿರುವುದನ್ನು ನೋಡಿ ಅವನಿಗೆ ಸೈಸುವುದಕ್ಕಾಗುತ್ತಿಲ್ಲ. ಅದಕ್ಕೇ ನಿನ್ನ ಕಂಡರೆ ಗ್ರಾಸ್ತನಿಗೆ ಅಷ್ಟಕ್ಕಷ್ಟೇ...'

ತಾವೇನಾದರೂ ಬರಿಗೈ ದಾಸಯ್ಯ ಆಗಿದ್ದರೆ ಇಷ್ಟು ಹೊತ್ತಿಗೆ ಅಳಿಯ 'ಉಫ್..' ಎಂದು ಊದಿ ಹಾರಿಸಿಬಿಡುತ್ತಿದ್ದನೇನೋ. ಆದರೆ ಪುಗಸಟ್ಟೆ ಸಿಗುವ ದೊಡ್ಡ ಗಂಟು ತೀರಾ ನಿಷ್ಠುರವಾಗಿ ನಡೆದುಕೊಳ್ಳಲು ಬಿಡುತ್ತಿಲ್ಲ, ಬಹುಶಃ... ಮಗಳಿಗೆ ಇದೆಲ್ಲಾ ಗೊತ್ತಾಗುವುದಿಲ್ಲವಾ? ಅಥವಾ ಗೊತ್ತಾದರೂ ಗಂಡನನ್ನು ಕೆಣಕಲು ಹೋಗದೆ ಸೌಹಾರ್ದ ಕಾಪಾಡಿಕೊಳ್ಳುವಷ್ಟು ಬುದ್ಧಿವಂತೆಯಾ ತನ್ನ ಕಂದ? ಅಪರೂಪಕ್ಕೆ ಮಾವ ಬಂದಿದ್ದಾರೆಂದು ಒಂದು ದಿನ ಬೆಂಗಳೂರು ಪೇಟೆ ಸುತ್ತಿಸಿದವನಲ್ಲ. ಸಿನಿಮಾ, ಹೋಟೆಲಿನ ಮುಖ ಕಾಣಿಸಲಿಲ್ಲ. ತಾವೇನು ಗತಿಗೆಟ್ಟು ಇವನ ಮನೆ ಬಾಗಿಲಿಗೆ ಹೋಗುತ್ತೇವಾ? ಮಗಳ ಮೋಹ ಎಳೆದುಕೊಂಡು ಹೋಗುತ್ತದೆ. 'ಹೋದ ಪುಟ್ಟ, ಬಂದ ಪುಟ್ಟ' ಅನ್ನುವಂತೆ ಮಗಳನ್ನು ನೋಡಿಕೊಂಡು ಬರುವಷ್ಟಕ್ಕೆ ಪ್ರಯಾಸದ ಪ್ರಯಾಣ ಸೀಮಿತ. ಅದರಲ್ಲೂ ಅಳಿಯ ಮನೆಯಲ್ಲಿದ್ದ ಅಂದರೆ ಉಸಿರು ಕಟ್ಟಿದಂತೆ ಇರಿಸುಮುರಿಸು. ಮಗಳ ಹತ್ತಿರ ಕೂಡಾ ಮನಬಿಚ್ಚಿ ಹರಟಲು ಹೋಗದೆ ಚೂಪಗೆ ಟೀವಿ ನೋಡುತ್ತಾ ಕೂತು ಕಾಲ ಕಳೆಯುತ್ತಿದ್ದರು ಭಟ್ಟರು. ಎಲ್ಲರ ಮಾತಿನ ಗುತ್ತಿಗೆ ವಹಿಸಿಕೊಂಡವಳಂತೆ ಮಗಳೇ ಬೇಕಾದ್ದು, ಬೇಡಾದ್ದು ಹರಟುತ್ತಿದ್ದಳು. 'ಎಲ್ಲಾ ಮಾರಿ ಹಾಕಿ ಇಲ್ಲೇ ಬಂದಿದ್ಬಿಡು ಅಪ್ಪಾ. ಸುಮ್ನೆ ಅಲ್ಲ್ಯಾಕೆ ಒದ್ದೋತಿ?' ಅನ್ನುವ ಮಾತು ಒಂದು ದಿನ ಮಗಳ ಬಾಯಿಂದ ಉದುರಿ ಬಿದ್ದು ಭಟ್ಟರನ್ನು ಚಮಕಿತರನ್ನಾಗಿಸಿತ್ತು. ಅಳಿಯನ ಅಪ್ಪ, ಅಮ್ಮ ಅವನ ಊರಲ್ಲಿ ಹಿರಿಮಗನ ಜೊತೆ ಇದ್ದಾರೆ. ತಾವು ಇಲ್ಲಿಗೆ ಬಂದಿದ್ದರೆ ತಪ್ಪೇನಿಲ್ಲ. ಹಾಗೊಂದು ಭವಿಷ್ಯದ ಯೋಜನೆ, ಯೋಚನೆ ಮನಸ್ಸಿನಲ್ಲಿ ಇದ್ದಿದ್ದೂ ಹೌದು. ಆದರೆ ಮಗಳ ಮನೆ ಸ್ವಂತದ್ದೆನಿಸದೆ ಪರಕೀಯ ಅನಿಸುವಂತೆ ಅಳಿಯ ಬಿಗಿಯಾಗಿದ್ದಾನಲ್ಲ? ಸುಕಾಸುಮ್ಮನೆ ಯಾರ ಕಾಲಬುಡಕ್ಕಾದರೂ ಯಾಕೆ ಹೋಗಿ ಬೀಳಬೇಕು? ಅಂತಾ ಕಾಲ ಬರದೇ ಇರಲಿ. ಹಾಗೆ ದೇವರು ಕರುಣೆ ತೋರಿಸಲಿ..

ಅಳಿಯ ನಾಗಭೂಷಣ ಮನೆಯಲ್ಲಿಲ್ಲ ಅಂದರೆ ಸಣ್ಣ ಹುಡುಗನಂತೆ ಮಗಳ ಹಿಂದೆ ಮುಂದೆ ಅಡಿಗೆಮನೆಯಲ್ಲಿ ಸುಳಿದಾಡುತ್ತಾ, ಮುಚ್ಚಿದ ಡಬ್ಬಿ ತೆಗೆದು ತಪಾಸಣೆ ಮಾಡುತ್ತಾ, ಹುರಿಗಡಲೆಗೋ, ಸೇಂಗಾಕಾಳಿಗೋ ನ್ಯಾಯ ಒದಗಿಸುತ್ತಾ, ಮಗಳು ಅಚ್ಚುಕಟ್ಟಾಗಿ ಸಂಸಾರ ಮಾಡಿಕೊಂಡಿರುವುದನ್ನು ನೋಡುವುದೇ ಭಟ್ಟರಿಗೆ ಮುದ. ಮಗಳು ಗಂಡನಿಗೆ ಹೊಂದಿಕೊಂಡಿದ್ದಾಳೆ. ಅವನೂ ಅಂಗೈಮಲ್ಲಿಗೆಯಂತೆ ಅವಳನ್ನು ಜೋಪಾಸನೆ ಮಾಡುತ್ತಾನೆ.